ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2019–20** **ದಿನಾಂಕ: 01–10–2019**

# ಪತ್ರಿಕಾ ಆಮಂತ್ರಣ

1. **ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ವತಿಯಿಂದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 150 ನೇ ಜನ್ಮ ದಿನಾಚರಣೆ ಕಾರ್ಯಕ್ರಮ:**

**ಉದ್ಘಾಟನೆ:**

**ಗೌರವಾನ್ವಿತ ನ್ಯಾಯಮೂರ್ತಿ ಶ್ರೀ ಅಭಯ ಶ್ರೀನಿವಾಸ ಓಕಾ,**
**ಕರ್ನಾಟಕ ಉಚ್ಛ ನ್ಯಾಯಾಲಯದ ಗೌರವಾನ್ವಿತ ಮುಖ್ಯ ನ್ಯಾಮೂರ್ತಿಗಳು ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಪ್ರಧಾನ ಪೋಷಕರು.**

**ಅಧ್ಯಕ್ಷತೆ:**

**ಗೌರವಾನ್ವಿತ ನ್ಯಾಯಮೂರ್ತಿ ಶ್ರೀ ಎಲ್. ನಾರಾಯಣ ಸ್ವಾಮಿ,**
**ಕರ್ನಾಟಕ ಉಚ್ಛ ನ್ಯಾಯಾಲಯದ ನ್ಯಾಯಮೂರ್ತಿಗಳು ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷರು.**

**ದಿನಾಂಕ: 02–10–2019, ಬುಧವಾರ ಸಮಯ : ಬೆಳಿಗ್ಗೆ 10.00 ಗಂಟೆಗೆ**

**ಸ್ಥಳ: ಎರಡನೇ ಮಹಡಿಯಲ್ಲಿರುವ ಪ್ರಧಾನ ಪೋಷಕರ ಸಭಾಂಗಣ, ಕರ್ನಾಟಕ ಉಚ್ಛ ನ್ಯಾಯಾಲಯ ಬೆಂಗಳೂರು.**

2. .ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಪಬ್ಲಿಕ್ ಸ್ಕೂಲ್ ಸಾರಕ್ಕಿ ಇವರ ವತಿಯಿಂದ "ಚಿಗುರು" ಮಕ್ಕಳ ಪ್ರತಿಭೆಯನ್ನು ಪ್ರೋತ್ಸಾಹಿಸುವ ಕಾರ್ಯಕ್ರಮ:

<u>ಉದ್ಘಾಟನೆ;</u>

ಶ್ರೀಮತಿ ಸೌಮ್ಯ ರೆಡ್ಡಿ
ಶಾಸಕರು, ಜಯನಗರ ವಿಧಾನಸಭಾ ಕ್ಷೇತ್ರ

<u>ಅಧ್ಯಕ್ಷತೆ:</u>

ಶ್ರೀ ಎಸ್. ಕೆ. ನಟರಾಜ್,
ಮಾಜಿ ಮಹಾಪೌರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
<u>ಮುಖ್ಯ ಅತಿಥಿಗಳು:</u>

ಶ್ರೀಮತಿ ದೀಪಿಕಾ ಮಂಜುನಾಥ್ ರೆಡ್ಡಿ,
ಸದಸ್ಯರು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ

ದಿನಾಂಕ: 02–10–2019, ಬುಧವಾರ ಸಮಯ : ಬೆಳಿಗ್ಗೆ 10.30 ಗಂಟೆಗೆ
ಸ್ಥಳ: ಕರ್ನಾಟಕ ಪಬ್ಲಿಕ್ ಸ್ಕೂಲ್, ಸಾರಕ್ಕಿ, ಬೆಂಗಳೂರು

3. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ, ಭಾರತೀಯ ಕೃಷಿ ಅನುಸಧಾನ ಪರಿಷತ್ ಸಂಯುಕ್ತ ಆಶ್ರಯದಲ್ಲಿ "ಜಲಶಕ್ತಿ ಅಭಿಯಾನ" ಕಾರ್ಯಕ್ರಮ

<u>ಉದ್ಘಾಟನೆ:</u>

ಶ್ರೀ ಡಿ.ವಿ. ಸದಾನಂದ ಗೌಡ,
ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯ, ಭಾರತ ಸರ್ಕಾರ

ದಿನಾಂಕ: 02–10–2019, ಬುಧವಾರ ಸಮಯ : ಬೆಳಿಗ್ಗೆ 10–30 ಗಂಟೆಗೆ

ಸ್ಥಳ: ಕುವೆಂಪು ಸಭಾಂಗಣ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು.

4. ಮಹಾತ್ಮ ಗಾಂಧಿ ಅವರ ವಿಶೇಷ ಛಾಯಾಚಿತ್ರ ಪ್ರದರ್ಶನ ಹಾಗೂ ಗಾಂಧಿ ಜಯಂತಿ
<u>ಉದ್ಘಾಟನೆ:</u>
ಶ್ರೀ ಬಿ.ಎಸ್. ಯಡಿಯೂರಪ್ಪ,
ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಘನ ಉಪಸ್ಥಿತಿ :

ಶ್ರೀ ಜಗದೀಶ್ ಶೆಟ್ಟರ್,

ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು

ದಿನಾಂಕ: 02–10–2019, ಬುಧವಾರ ಸಮಯ : ಬೆಳಿಗ್ಗೆ 11.00 ಗಂಟೆಗೆ

ಸ್ಥಳ : ಮೈಲಾರ ಮಹಾದೇವ ಸಭಾಂಗಣ, ಗಾಂಧಿ ಭವನ, ಕುಮಾರ ಕೃಪಾ ರಸ್ತೆ, ಬೆಂಗಳೂರು.

5. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವತಿಯಿಂದ ಗಾಂಧಿ ಗ್ರಾಮ ಪುರಸ್ಕಾರ ಪ್ರದಾನ ಸಮಾರಂಭ:

ಉದ್ಘಾಟನೆ:

ಶ್ರೀ ಬಿ.ಎಸ್. ಯಡಿಯೂರಪ್ಪ,

ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಅಧ್ಯಕ್ಷತೆ:

ಶ್ರೀ ಕೆ.ಎಸ್. ಈಶ್ವರಪ್ಪ,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವರು.

ದಿನಾಂಕ: 02–10–2019, ಬುಧವಾರ ಸಮಯ : ಅಪರಾಹ್ನ 12.00 ಗಂಟೆಗೆ

ಸ್ಥಳ : ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಂಗಳೂರು.

6. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಮಹಾತ್ಮ ಗಾಂಧೀ ಸೇವಾ ಪ್ರಶಸ್ತಿ – ಕರ್ನಾಟಕ 2019 – ಪ್ರಶಸ್ತಿ ಪ್ರದಾನ ಸಮಾರಂಭ:

ಪ್ರಶಸ್ತಿ ಪ್ರದಾನ:

ಶ್ರೀ ಬಿ.ಎಸ್. ಯಡಿಯೂರಪ್ಪ,

ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.

ಮುಖ್ಯ ಅತಿಥಿಗಳು:

ಶ್ರೀ ಭೀಮನಗೌಡ ಸಂಗನಗೌಡ ಪಾಟೀಲ್,

ವಿಶ್ರಾಂತ ನ್ಯಾಯಮೂರ್ತಿಗಳು, ಕರ್ನಾಟಕ ಉಚ್ಚ ನ್ಯಾಯಲಯ ಹಾಗೂ ಅಧ್ಯಕ್ಷರು,

ಮಹಾತ್ಮ ಗಾಂಧೀ ಸೇವಾ ಪ್ರಶಸ್ತಿ ಆಯ್ಕೆ ಸಮಿತಿ.

ಶ್ರೀ ಸಿ.ಟಿ. ರವಿ,

ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಶ್ರೀ ಪಿ.ಸಿ. ಮೋಹನ್,
ಲೋಕಸಭಾ ಸದಸ್ಯರು, ಬೆಂಗಳೂರು ಕೇಂದ್ರ,
ಶ್ರೀ ವೂಡೆ ಪಿ. ಕೃಷ್ಣ,
ಅಧ್ಯಕ್ಷರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ.

<u>ಅಧ್ಯಕ್ಷತೆ:</u>

ಶ್ರೀ ಉದಯ ಗರುಡಾಚಾರ್,
ರಾಜ್ಯ ವಿಧಾನಸಭಾ ಸದಸ್ಯರು, ಚಿಕ್ಕಪೇಟೆ ಕ್ಷೇತ್ರ

ದಿನಾಂಕ: 02–10–2019, ಬುಧವಾರ ಸಮಯ : ಸಂಜೆ 5.00 ಗಂಟೆಗೆ
ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಂಗಳೂರು.

7. ದೂರದರ್ಶನ, ಬೆಂಗಳೂರು ಸರ್ವೋದಯ ಅಂತಾರಾಷ್ಟ್ರೀಯ ಸಂಸ್ಥೆ, ಕರ್ನಾಟಕ ವಿಭಾಗ, ರಾಜಭವನ, ಕರ್ನಾಟಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದೊಂದಿಗೆ ಗಾಂಧಿ ಜಯಂತಿ – ಸತ್ಯ ಮತ್ತು ಅಹಿಂಸಾ ಮಹೋತ್ಸವ :

   <u>ಉದ್ಘಾಟನೆ:</u>

   ಶ್ರೀ ವಜುಭಾಯಿ ವಾಲಾ,
   ಗೌರವಾನ್ವಿತ ರಾಜ್ಯಪಾಲರು, ಕರ್ನಾಟಕ.

   <u>ಮುಖ್ಯ ಅತಿಥಿಗಳು:</u>

   ಶ್ರೀ ಡಿ.ವಿ. ಸದಾನಂದ ಗೌಡ,
   ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯ, ಭಾರತ ಸರ್ಕಾರ

   ಶ್ರೀ ಪಿ.ಸಿ. ಮೋಹನ್,
   ಲೋಕಸಭಾ ಸದಸ್ಯರು, ಬೆಂಗಳೂರು ಕೇಂದ್ರ,

   ಶ್ರೀ ವೂಡೆ ಪಿ. ಕೃಷ್ಣ,
   ಅಧ್ಯಕ್ಷರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ.

ದಿನಾಂಕ: 02–10–2019, ಬುಧವಾರ ಸಮಯ :  ಸಂಜೆ 6.00 ಗಂಟೆಗೆ
ಸ್ಥಳ: ಗಾಜಿನ ಮನೆ, ರಾಜಭವನ, ಬೆಂಗಳೂರು..

8. ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯ ಪ್ರಾರಂಭಿಕ ಸಭೆ.

ದಿನಾಂಕ: 03–10–2019 ಗುರುವಾರ, ಸಮಯ ; ಬೆಳಿಗ್ಗೆ 11.00 ಗಂಟೆಗೆ.
ಸ್ಥಳ: ಶಾಸಕರ ಭವನ–2 ರ ಸಮ್ಮೇಳನ ಸಭಾಂಗಣ, ಬೆಂಗಳೂರು.

## ಪತ್ರಿಕಾ ಪ್ರಕಟಣೆ

## ಸಚಿವರ ಪ್ರವಾಸ

ಬೆಂಗಳೂರು, ಅಕ್ಟೋಬರ್ 1 (ಕರ್ನಾಟಕ ವಾರ್ತೆ ) :

ವಸತಿ, ತೋಟಗಾರಿಕೆ ಮತ್ತು ರೇಷ್ಮೆ ಸಚಿವ ಹಾಗೂ ಮೈಸೂರು ಮತ್ತು ಮಡಿಕೇರಿ ಜಿಲ್ಲಾ ಉಸ್ತುವಾರಿ ಸಚಿವರೂ ಆದ ವಿ. ಸೋಮಣ್ಣ ಅವರು ಅಕ್ಟೋಬರ್ 1 ರಿಂದ 8 ರವರೆಗೆ ಮೈಸೂರು ಜಿಲ್ಲೆಯಲ್ಲಿ ನಡೆಯುವ ದಸರಾ ಮಹೋತ್ಸವದ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿರುವ ಅವರು ಅಕ್ಟೋಬರ್ 9 ರಂದು ನಗರಕ್ಕೆ ಹಿಂತಿರುಗಲಿದ್ದಾರೆ.

## ಸಚಿವರ ಪ್ರವಾಸ

ಬೆಂಗಳೂರು, ಅಕ್ಟೋಬರ್ 1 (ಕರ್ನಾಟಕ ವಾರ್ತೆ ) :

ಕಂದಾಯ ಮತ್ತು ಪೌರಾಡಳಿತ ಸಚಿವರು ಹಾಗೂ ಬೆಂಗಳೂರು ಗ್ರಾಮಾಂತರ ಮತ್ತು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಆರ್. ಅಶೋಕ ಅವರು ಅಕ್ಟೋಬರ್ 2 ಮತ್ತು 3 ರಂದು ಮಂಡ್ಯ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು, ಅಂದೇ ಬೆಂಗಳೂರಿಗೆ ಹಿಂತಿರುಗಲಿದ್ದಾರೆ.

## ಮೂರು ವರ್ಷಗಳ ಕಾಲಾವಧಿಗಾಗಿ
## ಮಕ್ಕಳ ಕಲ್ಯಾಣ ಸಮಿತಿ ಮತ್ತು ಬಾಲನ್ಯಾಯ ಮಂಡಳಿ ರಚನೆ

ಬೆಂಗಳೂರು, ಅಕ್ಟೋಬರ್ 1 (ಕರ್ನಾಟಕ ವಾರ್ತೆ ) :

ಬಾಲನ್ಯಾಯ (ಮಕ್ಕಳ ರಕ್ಷಣೆ ಮತ್ತು ಪೋಷಣೆ) ಕಾಯ್ದೆ 2015 ಹಾಗೂ ಬಾಲನ್ಯಾಯ ಮಾದರಿ ನಿಯಮ 2016 ರನ್ವಯ ದಿನಾಂಕ: 26-09-2017 ರ ಸರ್ಕಾರದ ಅಧಿಸೂಚನೆ 1 ಮತ್ತು 2 ರಲ್ಲಿ ಪ್ರತಿ ಜಿಲ್ಲೆಯಲ್ಲಿ ದಿನಾಂಕ: 26-09-2017 ರಿಂದ 25-09-2020 ರವರೆಗೆ 3 ವರ್ಷಗಳ ಕಾಲಾವಧಿಗಾಗಿ ಮಕ್ಕಳ ಕಲ್ಯಾಣ ಸಮಿತಿ ಮತ್ತು ಬಾಲನ್ಯಾಯ ಮಂಡಳಿಗಳನ್ನು ರಚಿಸಲಾಗಿರುತ್ತದೆ.

ಆಯ್ಕೆಯಾಗಿ ನೇಮಕಗೊಂಡ ಬಳ್ಳಾರಿ, ತುಮಕೂರು, ಮೈಸೂರು, ಹಾವೇರಿ, ಗದಗ ಮತ್ತು ಉತ್ತರ ಕನ್ನಡ ಜಿಲ್ಲೆಯ ಮಕ್ಕಳ ಕಲ್ಯಾಣಸಮಿತಿಯಲ್ಲಿ ತಲಾ ಒಂದು ಸದಸ್ಯತ್ವವು ರಾಯಚೂರು ಜಿಲ್ಲೆಯ ಬಾಲನ್ಯಾಯ ಮಂಡಳಿಯಲ್ಲಿ ಒಂದು ಮಹಿಳಾ ಸದಸ್ಯತ್ವ ಸದಸ್ಯರುಗಳ ರಾಜೀನಾಮೆಯಿಂದ ತೆರವಾಗಿರುತ್ತದೆ.

ಆದ್ದರಿಂದ ತೆರವಾಗಿರುವ ಬಳ್ಳಾರಿ, ತುಮಕೂರು, ಮೈಸೂರು, ಹಾವೇರಿ, ಗದಗ ಮತ್ತು ಉತ್ತರ ಕನ್ನಡ ಜಿಲ್ಲೆಯ ಮಕ್ಕಳ ಕಲ್ಯಾಣ ಸಮಿತಿಯ ತಲಾ ಒಂದು ಸದಸ್ಯತ್ವಕ್ಕೆ ಮತ್ತು ರಾಯಚೂರು ಜಿಲ್ಲೆಯ ಬಾಲನ್ಯಾಯ ಮಂಡಳಿಯ ಒಂದು ಮಹಿಳಾ ಸದಸ್ಯತ್ವಕ್ಕೆ ಉಳಿದ ಒಂದು ವರ್ಷ ಅವಧಿಗೆ ಅಂದರೆ ದಿನಾಂಕ: 25-09-2020 ವರೆಗೆ ಅರ್ಜಿಗಳನ್ನು ಆಹ್ವಾನಿಸಲಾಗುವುದು.

ಅರ್ಜಿ ನಮೂನೆ, ವಿಶೇಷ ಸೂಚನೆಗಳು, ದೃಡೀಕರಣಗಳನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವೆಬ್‌ಸೈಟ್ www.dwcdkar.gov.in ನಲ್ಲಿ ಲಭ್ಯವಿರುತ್ತೆ. ಮಕ್ಕಳ ಕಲ್ಯಾಣ ಸಮಿತಿ ಮತ್ತು ಬಾಲನ್ಯಾಯ ಮಂಡಳಿಗಳಿಗೆ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸುವುದು.

ಭರ್ತಿಮಾಡಿದ ಅರ್ಜಿಗಳನ್ನು ನೊಂದಾಯಿತ ಅಂಚೆ ಮೂಲಕ ಅಥವಾ ಮುದ್ದಾಂ ದಿನಾಂಕ 22-10-2019 ರಂದು ಸಂಜೆ5.30 ರೊಳಗೆ ನಿರ್ದೇಶಕರು, ಸಮಗ್ರ ಮಕ್ಕಳ ರಕ್ಷಣಾ ಯೋಜನೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮೊದಲನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001 ಇವರಿಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು, ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬೆಂಗಳೂರು ದೂರವಾಣಿ: 080-22879382/83 ಹಾಗೂ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರನ್ನು ಸಂಪರ್ಕಿಸಬಹುದಾಗಿದೆ.

## ಕಾರ್ಯಾಂಗದ ಮೇಲೆ ಸದನದ ಭರವಸೆ ಈಡೇರಿಸುವ ಹೊಣೆಗಾರಿಕೆ ಇದೆ : ಬಸವನಗೌಡ ಆರ್. ಪಾಟೀಲ್ ಯತ್ನಾಳ್

ಬೆಂಗಳೂರು, ಅಕ್ಟೋಬರ್ 1 ( ಕರ್ನಾಟಕ ವಾರ್ತೆ ) :

ಸದನದಲ್ಲಿ ಸಚಿವರು ನೀಡುವ ಭರವಸೆಗಳನ್ನು ಜಾರಿಗೊಳಿಸುವ ಗುರುತರ ಹೊಣೆಗಾರಿಕೆ ಕಾರ್ಯಾಂಗದ ಮೇಲಿರುತ್ತದೆ ಎಂದು ಕರ್ನಾಟಕ ವಿಧಾನಸಭೆಯ ಸರ್ಕಾರಿ ಭರವಸೆಗಳ ಸಮಿತಿಯ ಅಧ್ಯಕ್ಷ ಬಸನಗೌಡ ಆರ್. ಪಾಟೀಲ್ ಯತ್ನಾಳ್ ಅವರು ಅಭಿಪ್ರಾಯಪಟ್ಟರು.

ಹದಿನೈದನೇ ವಿಧಾನಸಭೆಯ ಎರಡನೇ ಅವಧಿಯ 2019-20 ನೇ ಸಾಲಿನ ಪ್ರಾರಂಭಿಕ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು. ಅಂತೆಯೇ ರಾಜ್ಯ ವಿಧಾನ ಸಭೆಯ ಕಾರ್ಯ ವಿಧಾನದ 236 ನೇ ನಿಯಮ ಅನುಸರಿಸಿ 207 ರಿಂದ 239 ನೇ ನಿಯಮಗಳಲ್ಲಿ ವಿವರಿಸಿರುವ ಸಮಿತಿಗಳ ಕಾರ್ಯವಿಧಾನಕ್ಕೆ ಪೂರಕವಾಗಿ ಆಂತರಿಕ ಕಾರ್ಯನಿರ್ವಹಣಾ ನಿಯಮಗಳನ್ನು ರಚಿಸಲಾಗಿದ್ದು, ಈ ನಿಯಮಗಳನ್ನು 1989 ರ ಮಾರ್ಚ್ 9 ರಿಂದ ಅಳವಡಿಸಿಕೊಳ್ಳಲಾಗಿದೆ. ಈ ಸಮಿತಿಯ ಮೊದಲ ಅವಧಿಯಲ್ಲಿ ಬಾಕಿ ಇದ್ದ 1334 ಭರವಸೆಗಳಲ್ಲಿ 23 ಇಲಾಖೆಗಳಿಗೆ ಸಂಬಂಧಪಟ್ಟಂತೆ ಬಾಕಿಯಿದ್ದ ಒಟ್ಟು 1112 ಭರವಸೆಗಳನ್ನು ಚರ್ಚಿಸಲಾಗಿದೆ. 2019-20 ನೇ ಸಾಲಿನ ಪ್ರಾರಂಭಿಕ ಸಭೆ ಇದಾಗಿದ್ದು 559 ಭರವಸೆಗಳು ಬಾಕಿ ಇರುತ್ತವೆ ಅಲ್ಲದೆ ಹಿಂದಿನ ಅಧಿವೇಶನದ ಭರವಸೆಗಳನ್ನು ಕ್ರೋಢೀಕರಿಸಲಾಗುತ್ತಿದೆ ಎಂದು ತಿಳಿಸಿದರು.

ಸದನದಲ್ಲಿ ಸಚಿವರು ಕಾಲಕಾಲಕ್ಕೆ ನೀಡುವ ಹೇಳಿಕೆಗಳು, ವಾಗ್ದಾನ, ಆಶ್ವಾಸನೆಗಳು ಭರವಸೆಗಳಾಗುತ್ತವೆ. ಇವನ್ನು ಒಂದು ಕಾಲಮಿತಿಯಲ್ಲಿ ವಾಸ್ತವಿಕ ನೆಲೆಗಟ್ಟಿನಲ್ಲಿ ಅನುಷ್ಠಾನಗಳಿಸುವ ಮೂಲಕ ಈಡೇರಿಸುವುದು ಸಮಿತಿಯ ಪ್ರಮುಖ ಕಾರ್ಯವಾಗಿದೆ ಎಂದರು.

ಹದಿನಾಲ್ಕನೇ ವಿಧಾನ ಸಭೆಯಲ್ಲಿ ಒಟ್ಟು 12 ವರದಿಗಳು, 15 ನೇ ವಿಧಾನ ಸಭೆಯಲ್ಲಿ ಇದುವರೆಗೆ 05 ವರದಿಗಳನ್ನು ಮಂಡಿಸಲಾಗಿದ್ದು ಒಂದು ಬಾರಿ ಸ್ಥಳ ವೀಕ್ಷಣೆ ಮಾಡಲಾಗಿದೆ. ಸಚಿವರು ನೀಡುವ ಭರವಸೆಗಳನ್ನು ಜಾರಿಗೊಳಿಸುವ ಗುರುತರ ಹೊಣೆಗಾರಿಕೆ ಕಾರ್ಯಾಂಗದ್ದಾಗಿರುತ್ತದೆ. ಸದಸ್ಯರೆಲ್ಲರೂ ಸಭೆಗಳಿಗೆ ತಪ್ಪದೆ ಹಾಜರಾಗಿ ಚರ್ಚೆಯಲ್ಲಿ ಭಾಗವಹಿಸಿ ಪರಿಣಾಮಕಾರಿಯಾದ ವರದಿಗಳನ್ನು ನೀಡಲು ಮತ್ತು ಅವುಗಳನ್ನು ಕಾರ್ಯರೂಪಕ್ಕೆ ತರಲು ತಮ್ಮೆಲ್ಲರ ಅತ್ಯಮೂಲ್ಯ ಸಲಹೆ ಸಹಕಾರ ಅವಶ್ಯಕ ಎಂದು ಅವರು ವಿವರಿಸಿದರು.

-ಪಿಎಸ್ಐ

ಛಾಯಾಚಿತ್ರ ಲಗತ್ತಿಸಿದೆ)

ಗಾಂಧೀ ಜಯಂತಿ ವಿಶೇಷತೆಗಳು :

**ಗಾಂಧೀ ಜಯಂತಿ ವಿಶೇಷ** :

**ಸ್ವಚ್ಛ ನಗರ ಹಾಗೂ ಸ್ವಾಸ್ಥ್ಯ ಪರಿಸರಕ್ಕಾಗಿ ಸೈಕಲ್ ಜಾಗೃತಿ ಜಾತಾ ಮತ್ತು ಸದ್ಭಾವನಾ ಪಾದಯಾತ್ರೆ ( ಬೆಳಗ್ಗೆ 9.30 ಗಂಟೆಗೆ )**

**"ಬಾ ಬಾಪು 150 ನೇ ಜನ್ಮ ವರ್ಷಾಚರಣೆ ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ಸುವರ್ಣ ಮಹೋತ್ಸವ ಸಮಾರೋಪ"** ದ ಅಂಗವಾಗಿ ಅಕ್ಟೋಬರ್ 2 ರಂದು ಸ್ವಚ್ಛ ನಗರ ಹಾಗೂ ಸ್ವಾಸ್ಥ್ಯ ಪರಿಸರಕ್ಕಾಗಿ ಸೈಕಲ್ ಜಾಗೃತಿ ಜಾಥಾ ಮತ್ತು ಸದ್ಭಾವನಾ ಪಾದಯಾತ್ರೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ವಾರ್ತಾ ಮತ್ತು ಪ್ರಸಾರ ಮಂತ್ರಾಲಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಗಾಂಧಿ ಶಾಂತಿ ಪ್ರತಿಷ್ಠಾನ, ಗಾಂಧಿ ಅಧ್ಯಯನ ಕೇಂದ್ರ ಮತ್ತು ಹುತಾತ್ಮ ಮೈಲಾರ ಮಹಾದೇವ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ ಸಹಕಾರ ಮತ್ತು ಸಹಯೋಗದೊಂದಿಗೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಈ ವಿಶೇಷ ಕಾರ್ಯಕ್ರಮವನ್ನು ವ್ಯವಸ್ಥೆಗೊಳಿಸಿದೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಜಿ. ಕಲ್ಪನಾ ಅವರು ಅಂದು ಬೆಳಗ್ಗೆ 9-30 ಗಂಟೆಗೆ ನಗರದ ಆನಂದರಾವ್ ವೃತ್ತದಿಂದ ಗಾಂಧೀ ಭವನದವರೆಗೆ ಸದ್ಭಾವನಾ ಪಾದಯಾತ್ರೆಗೆ ಚಾಲನೆ ನೀಡಲಿದ್ದಾರೆ. ಅದೇ ಸಮಯದಲ್ಲಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಎಸ್. ಎನ್. ಸಿದ್ದರಾಮಪ್ಪ ಅವರು ನಗರದ ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಮಹಾತ್ಮ ಗಾಂಧಿ ಪ್ರತಿಮೆಯ ಬಳಿಯಿಂದ ಗಾಂಧಿ ಭವನದವರೆಗೆ ಸೈಕಲ್ ಜಾಗೃತಿ ಜಾಥಾಕ್ಕೆ ಚಾಲನೆ ನೀಡಲಿದ್ದಾರೆ.

**ಮಹಾತ್ಮ ಗಾಂಧೀಜಿಯವರ ಪ್ರತಿಮೆಗೆ ಮಾಲಾರ್ಪಣೆ (ಬೆಳಗ್ಗೆ 10.10 ಗಂಟೆಗೆ )**

ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಜನ್ಮದಿನದ ಅಂಗವಾಗಿ ವಿಧಾನಸೌಧ ಮತ್ತು ವಿಕಾಸಸೌಧ ಮಧ್ಯೆ ಇರುವ ಗಾಂಧಿ ಪ್ರತಿಮೆಯ ಬಳಿ ಅವರ ಭಾವಚಿತ್ರಕ್ಕೆ ಮಾನ್ಯ ಮುಖ್ಯಮಂತ್ರಿಯವರು ಮಾಲಾರ್ಪಣೆ ಮಾಡಲಿದ್ದಾರೆ.

**ಮಹಾತ್ಮ ಗಾಂಧಿ ಸೇವಾ ಟ್ರಸ್ಟ್ ಪ್ರಾರಂಭೋತ್ಸವ (ಬೆಳಗ್ಗೆ 10.30 ಗಂಟೆಗೆ )**

ಮಹಾತ್ಮ ಗಾಂಧಿ ಸೇವಾ ಟ್ರಸ್ಟ್ (ರಿ) ವತಿಯಿಂದ ಆಯೋಜಿಸಿರುವ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 150 ನೇ ಜನ್ಮದಿನದ ಅಂಗವಾಗಿ **"ಮಹಾತ್ಮ ಗಾಂಧಿ ಸೇವಾ ಟ್ರಸ್ಟ್ ಪ್ರಾರಂಭೋತ್ಸವ ಹಾಗೂ ಮಹಾತ್ಮ ಗಾಂಧೀಜಿ ಪ್ರಶಸ್ತಿ ಪ್ರದಾನ ಸಮಾರಂಭ"**ವನ್ನು ಜ್ಞಾನಜ್ಯೋತಿ ಆಡಿಟೋರಿಯಂ, ಸೆಂಟ್ರಲ್ ಕಾಲೇಜ್ ಕ್ಯಾಂಪಸ್, ಬೆಂಗಳೂರು ಇಲ್ಲಿ ಆಯೋಜಿಸಲಾಗಿದೆ.

**ಗಾಂಧಿಭವನದ ಕಾರ್ಯಕ್ರಮಗಳು (ಬೆಳಗ್ಗೆ 11.15 ಗಂಟೆಗೆ )**

ನಗರದ ಕುಮಾರ ಕೃಪ ರಸ್ತೆಯ ಗಾಂಧಿ ಭವನದ ಮೈಲಾರ ಮಹಾದೇವ ಸಭಾಂಗಣದಲ್ಲಿ ಬೆಳಗ್ಗೆ 11.15 ಗಂಟೆಗೆ ನಡೆಯಲಿರುವ ಪ್ರಧಾನ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಿ ಎಸ್ ಯಡಿಯೂರಪ್ಪ ಅವರು **ಗಾಂಧಿ ವಿಶೇಷ ಛಾಯಾಚಿತ್ರ ಪ್ರದರ್ಶನವನ್ನು** ಉದ್ಘಾಟಿಸಲಿದ್ದಾರೆ. ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್ ಅವರು ಗಾಂಧೀ ಪುಸ್ತಕೋತ್ಸವ ಹಾಗೂ ಪುಸ್ತಕಗಳನ್ನು ಬಿಡುಗಡೆ ಮಾಡಲಿದ್ದಾರೆ.

ಇದೇ ಸಂದರ್ಭದಲ್ಲಿ ಗಾಂಧಿ 150 ಮತ್ತು ಗಾಂಧಿ ಭವನ ಕುರಿತ ವಿಶೇಷ ಲಕೋಟೆಯ ಲೋಕಾರ್ಪಣೆ, ಡಾ ಎನ್ ಜಗದೀಶ್ ಕೊಪ್ಪ ಅವರ ಗಾಂಧೀಗಿರಿಯ ಫಸಲುಗಳು ಕೃತಿಗೆ ಪುರಸ್ಕಾರ, ಚಾಮರಾಜನಗರದ ದೀನಬಂಧು ಮಕ್ಕಳ ಮನೆಯ ಸಂಸ್ಥಾಪಕ ಜಿ.ಎಸ್‌ಜಯದೇವ್ ಹಾಗೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಸೂ ರಂ ರಾಮಯ್ಯ ಅವರಿಗೆ ಗೌರವಾರ್ಪಣೆ, ಆರ್ ಜಿ ಮುತಾಲಿಕ್ ದೇಸಾಯಿ ಅವರ ಕೃತಿ ಹುಕ್ಕೇರಿಕರ ರಾಮರಾಯರು, ಕನ್ನಡಾನುವಾದದ ಕೃತಿಗಳಾದ ಜಿ ಡಿ ದೇಸಾಯಿ ಅವರ ಮಹಿಳೆಯರು ಮತ್ತು ಹನುಮಂತರಾವ್ ಮಂಜ್ರೇಕರ್ ಅವರ ನನ್ನ ಬಾಲ್ಯದ ನೆನಪುಗಳು, ಪ್ರಣತಿ ಪ್ರತಾಪ್ ಅವರ ಆಂಗ್ಲ ಭಾಷಾ ಅನುವಾದದ ಕೃತಿ ಕಸ್ತೂರಬಾ ಲೋಕಾರ್ಪಣೆಯಾಗಲಿವೆ.

**ಮುಖ್ಯಮಂತ್ರಿ ಅವರಿಂದ ರಾಜ್ಯದ 176 ಗ್ರಾಮ ಪಂಚಾಯತ್‌ಗಳಿಗೆ ಗಾಂಧಿ ಪುರಸ್ಕಾರ ( ಮಧ್ಯಾಹ್ನ 12.15 ಗಂಟೆಗೆ )**

ರಾಜ್ಯದ ಗ್ರಾಮ ಪಂಚಾಯತ್‌ಗಳ ಕಾರ್ಯ ನಿರ್ವಹಣೆಯನ್ನು ಪ್ರೋತ್ಸಾಹಿಸಲು ನೀಡುತ್ತಿರುವ ಗಾಂಧಿ ಪುರಸ್ಕಾರಕ್ಕೆ ಪ್ರತಿ ತಾಲ್ಲೂಕಿನ ಒಂದು ಗ್ರಾಮ ಪಂಚಾಯತ್ ನಂತೆ ರಾಜ್ಯದ 176 ಗ್ರಾಮ ಪಂಚಾಯತ್‌ಗಳನ್ನು ಆಯ್ಕೆ ಮಾಡಲಾಗಿದ್ದು, ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ 150 ನೇ ಜನ್ಮ ವರ್ಷಾಚರಣೆಯ ಸುಸಂದರ್ಭದಲ್ಲಿ ಅಕ್ಟೋಬರ್ 2 ರಂದು ಅಪರಾಹ್ನ 12.15 ಗಂಟೆಗೆ ವಿಧಾನ ಸೌಧದ ಔತಣ ಸಭಾಂಗಣದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಆಯೋಜಿಸಿರುವ ವಿಶೇಷ ಸಮಾರಂಭದಲ್ಲಿ ಮುಖ್ಯಮಂತ್ರಿ ಬಿ ಎಸ್ ಯಡಿಯೂರಪ್ಪ ಅವರು **ತಲಾ ಐದು ಲಕ್ಷ ರೂ ನಗದು** ಒಳಗೊಂಡ **ಗಾಂಧಿ ಪುರಸ್ಕಾರವನ್ನು** ಆಯ್ದ ಪಂಚಾಯತ್‌ಗಳಿಗೆ ಪ್ರದಾನ ಮಾಡಲಿದ್ದಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಯತ್‌ರಾಜ್ ಸಚಿವ ಕೆ ಎಸ್ ಈಶ್ವರಪ್ಪ ಅವರು ಅಧ್ಯಕ್ಷತೆ ವಹಿಸಲಿರುವ ಈ ಸಮಾರಂಭದಲ್ಲಿ ಕೇಂದ್ರ ಸಚಿವರು, ರಾಜ್ಯ ಸಚಿವ ಸಂಪುಟದ ಸದಸ್ಯರು ಪಾಲ್ಗೊಳ್ಳಲಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಪ್ರೊ. ಜಿ.ಎಸ್. ಜಯದೇವ ಅವರಿಗೆ ಮಹಾತ್ಮಾ ಗಾಂಧಿ ಸೇವಾ ಪ್ರಶಸ್ತಿ ಪ್ರದಾನ ( ಸಂಜೆ 5.30 ಗಂಟೆಗೆ )

ಮಾನ್ಯ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಅವರು ಅಕ್ಟೋಬರ್ 2 ರಂದು ಸಂಜೆ 5.30 ಗಂಟೆಗೆ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿರುವ ವಿಶೇಷ ಸಮಾರಂಭದಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ ಆಶಯಗಳನ್ನು ಪಸರಿಸುತ್ತಿರುವ ಹಾಗೂ ಪಾಲಿಸುತ್ತಿರುವ ವ್ಯಕ್ತಿಗಳಿಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕೊಡ ಮಾಡುವ **ಐದು ಲಕ್ಷ ರೂ ನಗದು** ಒಳಗೊಂಡ ಪ್ರತಿಷ್ಠಿತ **ಮಹಾತ್ಮಾ ಗಾಂಧಿ ಸೇವಾ ಪ್ರಶಸ್ತಿ**ಯನ್ನು ಪ್ರದಾನ ಮಾಡಲಿದ್ದಾರೆ.

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ ಶಾಸಕ ಉದಯ ಗರುಡಾಚಾರ್ ಅವರು ಅಧ್ಯಕ್ಷತೆ ವಹಿಸಲಿರುವ ಈ ಸಮಾರಂಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಹಾಗೂ ಪ್ರವಾಸೋದ್ಯಮ ಸಚಿವ ಸಿ. ಟಿ. ರವಿ, ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷರೂ ಆದ ಕರ್ನಾಟಕ ಉಚ್ಛ

ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಭೀಮನಗೌಡ ಸಂಗನಗೌಡ ಪಾಟೀಲ್, ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಲೋಕಸಭಾ ಸದಸ್ಯ ಪಿ. ಸಿ. ಮೋಹನ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೆ ಪಿ. ಕೃಷ್ಣ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಾರ್ಯದರ್ಶಿಗಳಾದ ಪಂಕಜ್ ಕುಮಾರ್ ಪಾಂಡೆ ಐ.ಎ.ಎಸ್. ಅವರೂ ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ.

## ರಾಜಭವನದ ಗಾಜಿನ ಮನೆಯಲ್ಲಿ ಸತ್ಯ ಮತ್ತು ಅಹಿಂಸಾ ಮಹೋತ್ಸವ

## ( ಸಂಜೆ 6.00 ಗಂಟೆಗೆ )

ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ 150 ನೇ ಜನ್ಮ ವರ್ಷಾಚರಣೆಯ ಸಂದರ್ಭದಲ್ಲಿ ಅಕ್ಟೋಬರ್ 2 ರಂದು ಸಂಜೆ 6-00 ಗಂಟೆಗೆ ರಾಜಭವನದ ಗಾಜಿನ ಮನೆಯಲ್ಲಿ **"ಸತ್ಯ ಮತ್ತು ಅಹಿಂಸಾ ಮಹೋತ್ಸವ"** ಹೆಸರಿನಲ್ಲಿ ನಡೆಯಲಿರುವ ಸಂಗೀತ ಮತ್ತು ನೃತ್ಯ ನಮನದ ಮೂಲಕ ಗಾಂಧೀಜಿ ಅವರಿಗೆ ಗೌರವ ಸಲ್ಲಿಸುವ ವಿಶೇಷ ಸಮಾರಂಭ ಇದಾಗಿದೆ.

ಬೆಂಗಳೂರು ದೂರದರ್ಶನ ಕೇಂದ್ರದ ಸಹಯೋಗ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಸರ್ವೋದಯ ಅಂತಾರಾಷ್ಟ್ರೀಯ ದತ್ತಿಯ ಸಹಕಾರದೊಂದಿಗೆ ಕರ್ನಾಟಕ ರಾಜಭವನವು ಈ ಸಮಾರಂಭವನ್ನು ಆಯೋಜಿಸಿದೆ.

ರಾಜ್ಯಪಾಲ ವಜುಭಾಯಿ ವಾಲಾ ಅವರು ಉದ್ಘಾಟಿಸಲಿರುವ ಈ ಸಮಾರಂಭದಲ್ಲಿ ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಡಿ ವಿ ಸದಾನಂದ ಗೌಡ, ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಸದಸ್ಯ ಪಿ ಸಿ ಮೋಹನ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ ವೂಡೇ ಪಿ ಕೃಷ್ಣ ಅವರು ಪಾಲ್ಗೊಳ್ಳಲಿದ್ದಾರೆ.

## ಮಹಾತ್ಮ ಗಾಂಧೀಜಿ ಜಯಂತಿ 150ನೇ ವರ್ಷಾಚರಣೆ ಸಂಬಂಧ ಅಕ್ಟೋಬರ್ ಮಾಹೆಯಾದ್ಯಂತ ವಿವಿಧ ಇಲಾಖೆಗಳಿಂದ ಹಮ್ಮಿಕೊಂಡಿರುವ ಕಾರ್ಯಕ್ರಮಗಳು

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

- ಮಹಾತ್ಮ ಗಾಂಧೀಜಿ ಜಯಂತಿಯ 150ನೇ ವರ್ಷಾಚರಣೆ ಸಂಬಂಧ ವಾರ್ತಾ ಮತ್ತು ಸಂಪರ್ಕ ಇಲಾಖೆ ವತಿಯಿಂದ ರಾಜ್ಯದ ಎಲ್ಲಾ 30 ಜಿಲ್ಲಾ ಕೇಂದ್ರಗಳಲ್ಲಿ ಗಾಂಧೀಜಿಯವರ ಕುರಿತ ಅಪರೂಪದ **ಛಾಯಾಚಿತ್ರ ಪ್ರದರ್ಶನವನ್ನು** ಏರ್ಪಡಿಸಲಾಗಿದೆ. ಈ ಛಾಯಾಚಿತ್ರ ಪ್ರದರ್ಶನವನ್ನು ಸನ್ಮಾನ್ಯ ಮುಖ್ಯಮಂತ್ರಿಯವರು ಅಕ್ಟೋಬರ್ 02 ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಉದ್ಘಾಟಿಸುವರು.
- ಗಾಂಧೀಜಿಯವರ ಕುರಿತು ಇಲಾಖೆಯು ಹೊರತಂದಿರುವ **"ಪಾಪುಬಾಪು" ಕಿರುಪುಸ್ತಕ** ವನ್ನು ಸನ್ಮಾನ್ಯ ಮುಖ್ಯಮಂತ್ರಿಯವರು ಅಕ್ಟೋಬರ್ 02 ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಬಿಡುಗಡೆ ಮಾಡಲಿರುವರು. ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರ ಇದೇ ಕಿರುಪುಸ್ತಕವನ್ನು ಜಿಲ್ಲಾ ಉಸ್ತುವಾರಿ ಸಚಿವರು/ಶಾಸಕರು/ ಜನಪ್ರತಿನಿಧಿಗಳು ಬಿಡುಗಡೆ ಮಾಡಲಿರುವರು.
- ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಗಾಂಧೀಜಿಯವರ ಕುರಿತು ಹಾಗೂ ಅವರ ತತ್ವ ಸಂದೇಶ ಸಾರುವ **ಸಾಕ್ಷ್ಯಚಿತ್ರ** ಪ್ರದರ್ಶನ ಹಾಗೂ ಗಾಂಧೀಜಿಯವರಿಗೆ ಪ್ರಿಯವಾಗಿದ್ದ **ಭಜನೆಗಳ** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
- ಗಾಂಧೀಜಿಯವರ ಕುರಿತು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ **ವಿಚಾರ ಸಂಕಿರಣ** ಹಾಗೂ **ವಿಶೇಷ ಉಪನ್ಯಾಸ** ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.
- ಗಾಂಧೀಜಿ ಕುರಿತು **ಚಲನಚಿತ್ರೋತ್ಸವ** ಹಮ್ಮಿಕೊಳ್ಳಲಾಗಿದೆ.
- ಜಿಲ್ಲಾಡಳಿತ ಸಹಯೋಗದಲ್ಲಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಅಕ್ಟೋಬರ್ 02, 2019 ರಂದು ಗಾಂಧಿ ಜಯಂತಿ ಆಚರಣೆ.

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

- ರಾಜ್ಯದ ಗ್ರಾಮ ಪಂಚಾಯತ್‌ಗಳ ಕಾರ್ಯ ನಿರ್ವಹಣೆಯನ್ನು ಪ್ರೋತ್ಸಾಹಿಸಲು ನೀಡುತ್ತಿರುವ ಗಾಂಧಿ ಪುರಸ್ಕಾರಕ್ಕೆ ಪ್ರತಿ ತಾಲ್ಲೂಕಿನ ಒಂದು ಗ್ರಾಮ ಪಂಚಾಯತ್ ನಂತೆ ರಾಜ್ಯದ 176 ಗ್ರಾಮ ಪಂಚಾಯತ್‌ಗಳನ್ನು ಆಯ್ಕೆ ಮಾಡಲಾಗಿದ್ದು, ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ 150ನೇ ಜನ್ಮ ವರ್ಷಾಚರಣೆಯ ಅಂಗವಾಗಿ ವಿಶೇಷ ಸಮಾರಂಭವನ್ನು ವಿಧಾನ ಸೌಧದ ಔತಣ ಸಭಾಂಗಣದಲ್ಲಿ ಆಯೋಜಿಸಲಾಗಿದೆ. 5.00 ಲಕ್ಷ ರೂ. ನಗದು ಒಳಗೊಂಡ ಈ ಪ್ರಶಸ್ತಿ ಪುರಸ್ಕಾರವನ್ನು ಮಾನ್ಯ ಮುಖ್ಯಮಂತ್ರಿಗಳು ಆಯ್ದ ಪಂಚಾಯತ್‌ಗಳಿಗೆ ಪ್ರದಾನ ಮಾಡಲಿದ್ದಾರೆ.
- ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳಿಗೆ ಗಾಂಧೀಜಿಯವರ ಕುರಿತ ಸೇವಾ ಭಾವನೆ ಮೂಡಿಸಲು ಕಾರ್ಯಾಗಾರವನ್ನು ಏರ್ಪಡಿಸಿದೆ.

## ಕನ್ನಡ ಮತ್ತು ಸಂಸ್ಕೃತಿ ಇಲಾಖೆ

- **"ಗಾಂಧಿ 150 : ರಂಗ ಪಯಣ"** ರಾಜ್ಯದ ಶಾಲಾ ಕಾಲೇಜುಗಳಲ್ಲಿ ಪಾಪು ಬಾಪು ನಾಟಕ ಪ್ರದರ್ಶನ.

- ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿರುವ ಅಕಾಡೆಮಿಗಳು, ರಂಗಾಯಣ ಮತ್ತು ಪ್ರಾಧಿಕಾರಗಳು ಹಾಗೂ ಪ್ರತಿಷ್ಠಾನಗಳಲ್ಲಿ ಗಾಂಧಿ ವಿಷಯ ಮತ್ತು ವಿಚಾರಗಳಿಗೆ ಸಂಬಂಧಿಸಿದಂತೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.
- ಆಕಾಶವಾಣಿ ಸಮನ್ವಯದೊಂದಿಗೆ ಮಹಾತ್ಮ ಗಾಂಧೀಜಿ ಅವರ ಆತ್ಮಕಥೆ **"ನನ್ನ ಸತ್ಯಾನ್ವೇಷಣೆ"** ಕೃತಿಯನ್ನು ನಾಡಿನ ಶಿಕ್ಷಣ ತಜ್ಞರಾದ ಶ್ರೀ ಗುರುರಾಜ ಕರ್ಜಗಿ ಅವರಿಂದ ಸೂಕ್ತ ನಿರೂಪಣೆಯೊಂದಿಗೆ ಧ್ವನಿ ರೂಪದಲ್ಲಿ ಆಕಾಶವಾಣಿ ಮೂಲಕ ನಾಡಿನ ಜನತೆಗೆ ಸಮರ್ಪಣೆ.

## ಪ್ರವಾಸೋದ್ಯಮ ಇಲಾಖೆ

- ಮಹಾತ್ಮ ಗಾಂಧೀಜಿ ಅವರು ಕರ್ನಾಟಕಕ್ಕೆ ಭೇಟಿ ನೀಡಿದ್ದ ಸ್ಥಳಗಳನ್ನು ಗುರುತಿಸಿ, ಅಲ್ಲಿಗೆ ಪ್ರವಾಸಿಗರು ಭೇಟಿ ನೀಡುವಂತೆ ಕಾರ್ಯಕ್ರಮ ಏರ್ಪಡಿಸಿದೆ.
- ಗಾಂಧೀಜಿ ಅವರು ಭೇಟಿ ನೀಡಿದ್ದ ಬೆಳಗಾವಿ ಅಧಿವೇಶನ ನಡೆದ ಬೆಳಗಾವಿ, ಆರೋಗ್ಯ ಸುಧಾರಣೆಗಾಗಿ ಒಂದು ತಿಂಗಳ ಕಾಲ ತಂಗಿದ್ದ ನಂದಿಬೆಟ್ಟ, ಬೆಂಗಳೂರು ನಗರ ಹಾಗೂ ರಾಜ್ಯದ ವಿವಿಧೆಡೆ ಹಲವಾರು ಸಂಘ ಸಂಸ್ಥೆಗಳನ್ನು ಗುರುತಿಸಿ ಆಸಕ್ತ ಶಾಲಾ ಮಕ್ಕಳಿಗೆ ಶೈಕ್ಷಣಿಕ ಪ್ರವಾಸ ಏರ್ಪಡಿಸಿದೆ.
- ರಾಜ್ಯಾದ್ಯಂತ ಇದೇ ಮಾದರಿಯಲ್ಲಿ ಆಯಾ ಜಿಲ್ಲೆಗಳಲ್ಲಿ ಗಾಂಧೀಜಿ ಭೇಟಿ ನೀಡಿದ ಸ್ಥಳಗಳನ್ನು ಗುರುತಿಸಿ ಶಾಲಾ ವಾರ್ಷಿಕ ಶೈಕ್ಷಣಿಕ ಪ್ರವಾಸ ಸಂಯೋಜನೆ ಸಮಯದಲ್ಲಿ ಈ ಸ್ಥಳಗಳನ್ನು ಪ್ರವಾಸ ಕಾರ್ಯಕ್ರಮದಲ್ಲಿ ಸೇರಿಸಿಕೊಳ್ಳುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಗೆ ಸಲಹೆ ನೀಡಲಾಗುವುದು.
- ಪ್ರವಾಸೋದ್ಯಮ ಇಲಾಖೆಯ ನಿಗದಿತ ಪ್ರವಾಸ ಪಟ್ಟಿಯಲ್ಲಿ ಅವಕಾಶ ಇರುವ ಕಡೆ ಗಾಂಧಿ ಕೇಂದ್ರಿತ ಸ್ಥಳಗಳ ಭೇಟಿಗೆ ಅವಕಾಶ ಕಲ್ಪಿಸಲು ತಿಳಿಸಲಾಗಿದೆ.
- ಗಾಂಧೀಜಿ ಅವರು ಭೇಟಿ ನೀಡಿದ ಸ್ಥಳಗಳಲ್ಲಿ ಭೇಟಿ ಸಂದರ್ಭದ ಕಿರು ಮಾಹಿತಿ ಫಲಕಗಳನ್ನು ಅಳವಡಿಸಲಾಗುವುದು.
- ಬೈಕರ್ಸ್ ಅಸೋಸಿಯೇಷನ್ ಅವರನ್ನು ಸಂಪರ್ಕಿಸಿ ಎಲ್ಲಾ ಜಿಲ್ಲೆಗಳಲ್ಲಿ ಕನಿಷ್ಠ 150 ಬೈಕ್ ರ್‍ಯಾಲಿ ಏರ್ಪಡಿಸಿದೆ.

## ಶಿಕ್ಷಣ ಇಲಾಖೆ

- **"ಗಾಂಧಿ 150 : ರಂಗ ಪಯಣ"** ಕಾರ್ಯಕ್ರಮದ ಯಶಸ್ವಿಗಾಗಿ ಶಾಲೆಗಳನ್ನು ಗುರುತಿಸಿ, ನಾಟಕ ಪ್ರದರ್ಶನ ಏರ್ಪಡಿಸುವುದು.
- ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಎಲ್ಲಾ ವಿದ್ಯಾರ್ಥಿಗಳಿಗೂ ಗಾಂಧೀಜಿ ಅವರ ವಿಚಾರಧಾರ ತಲುಪುವಂತೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.
- ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವತಿಯಿಂದ ರಂಗತಂಡಗಳು ನಡೆಸಿಕೊಡುವ ನಾಟಕಗಳನ್ನು ಆಯ್ದ ಶಾಲೆಗಳಲ್ಲಿ ಏರ್ಪಡಿಸಲಾಗುವುದು.

- **"ಪಾಪು ಗಾಂಧಿ-ಬಾಪು ಗಾಂಧಿ"** ನಾಟಕವನ್ನು ವಿದ್ಯಾರ್ಥಿಗಳಿಂದಲೇ ತರಬೇತುಗೊಳಿಸಿ ಶಾಲೆಗಳಲ್ಲಿ ಪ್ರದರ್ಶಿಸಲಾಗುವುದು.
- ಗಾಂಧೀಜಿ ಅವರ ಕುರಿತ ಕಿರುಹೊತ್ತಿಗೆಗಳನ್ನು ವಿದ್ಯಾರ್ಥಿಗಳಿಗೆ ಉಚಿತವಾಗಿ ವಿತರಣೆ.
- ಶಿಕ್ಷಕರಿಗೆ ಗಾಂಧೀಜಿ ಅವರ ತತ್ವಾದರ್ಶಗಳ ಕುರಿತ 2 ದಿನದ ಶಿಬಿರ ಏರ್ಪಡಿಸಿದೆ.
- ಗಾಂಧೀಜಿ ಅವರ ಬಗ್ಗೆ ಎಲ್ಲಾ ಶಾಲೆಗಳಲ್ಲಿ ಪ್ರಬಂಧ ಬರೆಸಿ ಬಹುಮಾನ ನೀಡಲು ಕ್ರಮ ಕೈಗೊಳ್ಳಲಾಗಿದೆ.
- ವರ್ಷಪೂರ್ತಿ ಪ್ರತಿನಿತ್ಯ ರಾಜ್ಯದ ಎಲ್ಲಾ ಶಾಲೆಗಳಲ್ಲಿ ಗಾಂಧೀಜಿ ಅವರ ಸಂದೇಶಗಳನ್ನು ದಿನಕ್ಕೆ ಒಂದರಂತೆ ನಾಮಫಲಕದಲ್ಲಿ ಬರೆಸುವುದು ಹಾಗೂ ಒಂದು ಸಂದೇಶವನ್ನು ವಿದ್ಯಾರ್ಥಿಗಳಿಂದ ಓದಿಸುವುದು.
- ಪ್ರಾಥಮಿಕ ಶಾಲೆಯಿಂದ ಪದವಿ ವರೆಗೆ ಗಾಂಧೀಜಿ ಅವರ ವಿಚಾರ ಧಾರೆಗಳನ್ನು ಪಠ್ಯದಲ್ಲಿ ಸೇರಿಸಲು ಕ್ರಮ ಕೈಗೊಳ್ಳಲಾಗಿದೆ.

* * * * *

## <u>ಕನ್ನಡ ಮತ್ತು ಸಂಸ್ಕೃತಿ ಇಲಾಖೆ</u>

- **ಮೈಸೂರು, ಧಾರವಾಡ, ಶಿವಮೊಗ್ಗ, ಕಲಬುರಗಿ ನಾಲ್ಕು ರಂಗಾಯಣಗಳ ಮೂಲಕ ಪಾಪು-ಬಾಪು "ಬಾಪು-ಪಾಪು" ನಾಟಕವನ್ನು ರಾಜ್ಯಾದ್ಯಂತ ಸುಮಾರು 2000 ಪ್ರದರ್ಶನಗಳನ್ನು ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಹಾಗೂ ಕಾಲೇಜುಗಳಲ್ಲಿ ಏರ್ಪಡಿಸಲಾಗುತ್ತಿದೆ.**
- **ಇಲಾಖೆಯ ಅಧೀನದಲ್ಲಿ ಬರುವ ಅಕಾಡೆಮಿಗಳು ಪ್ರಾಧಿಕಾರಗಳು ಅಯೋಜಿಸುವ ಕಾರ್ಯಕ್ರಮಗಳಲ್ಲಿ ಗಾಂಧೀ –150 ಕಾರ್ಯಕ್ರಮವನ್ನು ಆದ್ಯತೆಯಲ್ಲಿ ಅಳವಡಿಸಿಕೊಂಡು ಆಚರಿಸಲಾಗುತ್ತಿದೆ.**
- **ಗಾಂಧೀಜಿಯವರ ಆತ್ಮಕಥೆ "ನನ್ನ ಸತ್ಯಾನ್ವೇಷಣೆ" ಬಾನುಲಿ ರೂಪದ ಕಾರ್ಯಕ್ರಮವನ್ನು ಆಕಾಶವಾಣಿ ಮೂಲಕ ರಾಜ್ಯಾದ್ಯಂತ ಪ್ರಸಾರ ಮಾಡಲು ಕ್ರಮ ವಹಿಸಲಾಗಿದೆ.**

## <u>ಪ್ರವಾಸೋದ್ಯಮ</u>

- **ಮಹಾತ್ಮ ಗಾಂಧೀಜಿಯವರು ಕರ್ನಾಟಕ ರಾಜ್ಯಕ್ಕೆ ಭೇಟಿ ನೀಡಿದ ಪ್ರಮುಖ ಸ್ಥಳಗಳಾದ ಜಕ್ಕಳ್ಳಿ- ಗದಗ ಜಿಲ್ಲೆ, ಬೆಂಗೇರಿ-ಧಾರವಾಡ ಜಿಲ್ಲೆ, ಕೂಡ್ಲಿಗೆ-ಬಳ್ಳಾರಿ ಜಿಲ್ಲೆ, ನಂದಿಬೆಟ್ಟ-ಚಿಕ್ಕಬಳ್ಳಾಪುರ ಜಿಲ್ಲೆ, ಹೂಡ್ಲಿ-ಬೆಳಗಾವಿ ಜಿಲ್ಲೆ ಈ ಸ್ಥಳಗಳಿಗೆ ಪ್ರವಾಸಿಗರು ಭೇಟಿ ನೀಡುವಂತೆ ಕಾರ್ಯಕ್ರಮ ರೂಪಿಸಲಾಗಿದೆ.**

- ರಾಜ್ಯಾದಾದ್ಯಂತ ಆಯಾ ಜಿಲ್ಲೆಗಳಲ್ಲಿ ಮಹಾತ್ಮ ಗಾಂಧೀಜಿಯವರು ಭೇಟಿ ನೀಡಿದ ಸ್ಥಳಗಳನ್ನು ಗುರುತಿಸಿ ಶಾಲಾ ವಾರ್ಷಿಕ ಶೈಕ್ಷಣಿಕ ಪ್ರವಾಸ ಸಮಯದಲ್ಲಿ ಸದರಿ ಸ್ಥಳಗಳಿಗೆ ಪ್ರವಾಸವನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯೊಂದಿಗೆ ವಿದ್ಯಾರ್ಥಿಗಳಿಗೆ ಆಯೋಜಿಸಲಾಗುತ್ತಿದೆ.
- ಪ್ರವಾಸೋದ್ಯಮ ಇಲಾಖೆಯಿಂದ ಎಸ್.ಸಿ.ಪಿ./ಟಿಎಸ್‌ಪಿ ಯೋಜನೆಯಡಿಯಲ್ಲಿ ಹಮ್ಮಿಕೊಳ್ಳುವ "ಚಿಣ್ಣರ ಕರ್ನಾಟಕ ದರ್ಶನ" ಕಾರ್ಯಕ್ರಮದ ನಿಗಧಿತ ಪ್ರವಾಸ ಪಟ್ಟಿಯಲ್ಲಿ ಅವಕಾಶವಿರುವೆಡೆ ಗಾಂಧಿ ಕೇಂದ್ರೀಕೃತ ಸ್ಥಳಗಳ ಭೇಟಿಗೆ ಅವಕಾಶ ಕಲ್ಪಿಸಲಾಗುತ್ತಿದೆ.
- ಮಹಾತ್ಮ ಗಾಂಧೀಜಿರವರು ಭೇಟಿ ನೀಡಿದ ಸ್ಥಳಗಳಲ್ಲಿ, ಆ ಸಂದರ್ಭದ ಇುಡಿಣ ಮಾಹಿತಿ ಫಲಕಗಳನ್ನು ಅಳವಡಿಸಿ, ಸಾರ್ವಜನಿಕರಿಗೆ ಮಾಹಿತಿ ನೀಡಲಾಗುತ್ತಿದೆ.
- ಬೈಕ್‌ರ್ ಅಸೋಸಿಯೇಶನ್ಸ್‌ರವರ ಸಹಯೋಗದೊಂದಿಗೆ ಮಹಾತ್ಮಗಾಂದೀಜಿಯವರ ಸಂದೇಶಗಳನ್ನು ಜಿಲ್ಲೆಗಳಲ್ಲಿ ಬೈಕ್ ರ್‍ಯಾಲಿ ಏರ್ಪಡಿಸುವ ಮೂಲಕ ಜನರಿಗೆ ತಲುಪಿಸುವುದು.